

ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಎಲ್ಲೆಡೆ ಮದುವೆಗಳು ಸರಳವಾಗುತ್ತಿವೆ. ಇದು ಪ್ಯಾಲಿಸ್ಟೀನ್‌ನಲ್ಲಿ ನಡೆದ ಮದುವೆ ನೋಟ

ಹೆಸರಿನಲ್ಲಿಯೇ ಠೇವಣಿ ಇಟ್ಟಿದ್ದೇನೆ. ಮೊದಲ ಮಗಳ ಮದುವೆಯನ್ನು ಹೀಗೇ ಮಾಡಿದ್ದರೆ ಚೆನ್ನಾಗಿತ್ತು ಎಂಬ ಯೋಚನೆ ಈಗ ಬರುತ್ತಿದೆ. ಹೌದು, ಮದುವೆಗೆ ಅಷ್ಟೊಂದು ಹಣ ವ್ಯಯಿಸುವ ಅಗತ್ಯವಿಲ್ಲ. ಸಾಲ ಮಾಡುವ ಅಗತ್ಯವೂ ಇಲ್ಲ. ದುಡ್ಡು ಎತ್ತಿಟ್ಟರೆ ಮಕ್ಕಳ ಭವಿಷ್ಯಕ್ಕೆ ಬರುತ್ತದೆ' ಎನ್ನುತ್ತಾರೆ ಅವರು. ಹೇಮರೆಡ್ಡಿ ಅವರ ಈ ಯೋಚನಾಲಹರಿ, ಗ್ರಾಮಾಂತರ ಭಾಗದಲ್ಲಿ ಮದುವೆಗಳ ವಿಷಯವಾಗಿ ನಡೆದಿರುವ ಮರುಚಿಂತನೆಗಳಿಗೆ ದ್ಯೋತಕವಾಗಿದೆ.

### ಸಂಕಷ್ಟದ ಕಥೆಗಳು

ಸದ್ಯ ಅನಿವಾರ್ಯ ಎನಿಸಿರುವ ಅಥವಾ 'ನ್ಯೂ ನಾರ್ಮಲ್' ಆಗುವತ್ತ ಹೆಜ್ಜೆ ಹಾಕಿರುವ ಸರಳ ಮದುವೆಗಳ ಪರಿಣಾಮವನ್ನು ಹೀಗೇ ಎಂದು ಸುಲಭವಾಗಿ ವ್ಯಾಖ್ಯಾನಿಸಲು ಆಗದು. ಅದರ ಪರಿಣಾಮಗಳಿಗೆ ಹಲವು 'ಶೇಡ್'ಗಳಿವೆ. ಅದನ್ನು ಕಾಣಬೇಕಾದರೆ ಮದುವೆಯನ್ನೇ ಅವಲಂಬಿಸಿದ ಕಾರ್ಮಿಕರ ಓಣಿಗಳಲ್ಲೊಮ್ಮೆ ಹಾದು ಬರಬೇಕು. ಅಡುಗೆಯ ಗುತ್ತಿಗೆ ಕಾರ್ಯದಲ್ಲಿ ಸದಾ ಮುಳುಗಿರುತ್ತಿದ್ದ ಹುಬ್ಬಳ್ಳಿಯ ರಾಘವೇಂದ್ರ ಕವಲೂರು ಅವರನ್ನು ಮಾತಿಗೆಳೆದಾಗ ಸಂಕಷ್ಟದ ಕಥೆಗಳು ಸುರುಳಿ, ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ.

'ಕಳೆದ ಮಾರ್ಚ್‌ನಿಂದ ಜುಲೈವರೆಗೆ ಒಟ್ಟಾರೆ 24 ಅಡುಗೆ ಗುತ್ತಿಗೆಗಳು ಬುಕ್ ಆಗಿದ್ದವು. ಆದರೆ, ಎರಡು ಗುತ್ತಿಗೆಗಳು – ಅದೂ ಭಾಗಶಃ – ಮಾತ್ರ ಸಿಕ್ಕು, ಮಿಕ್ಕೆಲ್ಲವೂ ರದ್ದಾದವು. ನಮಗೆ ವರ್ಷದ



ಛತ್ರಗಳಿಗೆ ದೀಪಾಲಂಕಾರ ಮಾಡುವ ಅವಕಾಶ ಈ ವರ್ಷ ಸಿಕ್ಕೇ ಇಲ್ಲ ನೋಡಿ...

## ಇನ್ನೂ ದುಬಾರಿ ಆಗಲಿವೆಯೇ ಮದುವೆಗಳು?

ಕೊರೊನಾ ಸಂಕಷ್ಟದ ನಂತರದ ಕಾಲಘಟ್ಟ ಸರಳ ಮದುವೆಗಳೇ 'ನ್ಯೂ ನಾರ್ಮಲ್' ಆಗಲಿವೆ ಎನ್ನುವ ಮಾತುಗಳು ಕೇಳಿಬರುತ್ತಿದ್ದರೂ ಮದುವೆ ಆಯೋಜಕರು ಈ ಸಂದರ್ಭವನ್ನು ಅವಕಾಶವನ್ನಾಗಿ ಬಳಸಿಕೊಳ್ಳುವುದು ಹೇಗೆ ಎಂಬ ವಿಷಯವಾಗಿ ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಹೊಸ ಹೊಸ ಸಾಧ್ಯತೆಗಳನ್ನು ಅವರು ಹುಡುಕುತ್ತಿದ್ದಾರೆ. ವಧು–ವರರ ಪಾಲಕರಿಂದ ಇನ್ನಷ್ಟು ಹೆಚ್ಚು ಖರ್ಚು ಮಾಡಿಸುವ ವಿಧಾನದ ತಲಾಷಿನಲ್ಲಿ ಅವರಿದ್ದಾರೆ.

ಅಂತರ ಕಾಯ್ದುಕೊಳ್ಳಲು ಬಯಲು ಛತ್ರಗಳ ಪರಿಕಲ್ಪನೆಯು ಚಿಗುರೊಡೆಯಲು ಆರಂಭಿಸಿದೆ. ಭೋಜನದ ವ್ಯವಸ್ಥೆಗೆ ದೊಡ್ಡ ದೊಡ್ಡ ಟೇಬಲ್‌ಗಳನ್ನು ಅಳವಡಿಸಿ ದೂರ ದೂರ ಕುರ್ಚಿಗಳನ್ನು ಹಾಕುವ ಪರಿಪಾಟವೂ ಬೆಳೆಯಲಾರಂಭಿಸಿದೆ. ಉದಾಹರಣೆಗೆ ಮೊದಲು ಒಂದು ಟೇಬಲ್‌ನಲ್ಲಿ ಹತ್ತು ಜನ ಕೂರುತ್ತಿದ್ದರೆ, ಈಗ ಐವರಿಗೆ ಮಾತ್ರ ವ್ಯವಸ್ಥೆ ಮಾಡಲಾಗುತ್ತಿದೆ. ಮದುವೆಗೆ ಬರುವವರಿಗೆ ಮೊದಲು ಸುಗಂಧ ದ್ರವ್ಯ ಸಿಂಪಡಿಸುವ ಪರಿಪಾಟ ಇತ್ತು. ಈಗ ಅದರ ಜತೆಗೆ ಸ್ಯಾನಿಟೈಸರ್ ಪೂರೈಸುವ ಪ್ರಕ್ರಿಯೆಯೂ ಆರಂಭವಾಗಿದೆ. ಬಫೆಗಳಲ್ಲಿ ನೂರಾರು ಕೈಗಳು ಅದೇ ಚಮಚ ಅಥವಾ ಇತರ ಸಲಕರಣೆಗಳನ್ನು ಮುಟ್ಟದಂತೆ ನೋಡಿಕೊಳ್ಳಲು ಬಫೆಯಲ್ಲಿ ಪ್ರತಿಯೊಂದು ತಿಂಡಿಯನ್ನು ಹಾಕಲು ಸರ್ವರ್‌ಗಳ ವ್ಯವಸ್ಥೆ ಮಾಡಲಾಗುತ್ತಿದೆ. ವರ್ಚ್ಯುವಲ್ ಮದುವೆಗಳ ವ್ಯವಸ್ಥಾಪಕರು ಸಹ ಹುಟ್ಟಿಕೊಂಡಿದ್ದಾರೆ. ಮದುವೆ ಸಮಾರಂಭದ ನೇರ ಪ್ರಸಾರಗಳನ್ನೂ ಮಾಡಲಾಗುತ್ತಿದೆ.

ಜಗತ್ತಿನ ಬಹುತೇಕ ದೇಶಗಳಲ್ಲಿ ಮದುವೆ ಸಂಸ್ಕೃತಿ ಈಗ ದಿಢೀರ್ ಬದಲಾಗಿದೆ. ಅಲ್ಲಿ ನಡೆಯುವ ಆಚರಣೆ ವಿಧಾನಗಳಲ್ಲೂ ಮಾರ್ಪಾಡುಗಳು ಆಗಿವೆ. ರಿಸೆಪ್ಷನ್‌ಗಳ ಗಾತ್ರ ಭಾರೀ ಪ್ರಮಾಣದಲ್ಲಿ ಕುಗ್ಗಿದೆ. ವಧುಗಳು ಡಿಸೈನರ್ ಡ್ರೆಸ್‌ಗಳ ಬದಲು ಸರಳ ಉಡುಪೇ ಸಾಕು ಎನ್ನುತ್ತಿದ್ದಾರೆ. ಅಮ್ಮನ ಆಭರಣಗಳನ್ನೇ ಧರಿಸಲು ಮನಸ್ಸು ಮಾಡುತ್ತಿದ್ದಾರೆ. ಹೊಸ ಟ್ರೆಂಡ್ ಹುಟ್ಟುಹಾಕುವ ಮೂಲಕ ಮದುವೆ ಉದ್ಯಮಕ್ಕೆ ಹೇಗೆ ನವಚೈತನ್ಯ ನೀಡಬಹುದು ಎಂಬುದರ ಕುರಿತು ಚಿಂತಿಸುತ್ತಿರುವ ಮದುವೆ ಆಯೋಜಕರು, ಮುಂದಿನ ದಿನಗಳಲ್ಲಿ ಮದುವೆಗಳನ್ನು ಇನ್ನಷ್ಟು ದುಬಾರಿ ಆಗುವಂತೆ ನೋಡಿಕೊಂಡರೂ ಆಶ್ಚರ್ಯವಿಲ್ಲ.